# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 12-03-2021 ಪ್ರಶ್ನೆ ಸಂಖ್ಯೆ : 913 (926)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 12-03-2021

ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ವಿಷಯ : ರಾಜ್ಯದಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಅನಧಿಕೃತ ಕಟ್ಟಡಗಳನ್ನು ಸಕ್ರಮ ಮಾಡುವ ಬಗ್ಗೆ

(ಅ) ರಾಜ್ಯದಲ್ಲಿನ ಎಷ್ಟು ಗ್ರಾಮ ಪಂಚಾಯತಿಯ ವ್ಯಾಪ್ತಿಗಳಲ್ಲಿ ಕಂದಾಯಕ್ಕೆ ಒಳಪಡದೇ, ಅಕ್ರಮವಾಗಿ ಅನಧಿಕೃತ ಕಟ್ಟಡ/ಅಂಗಡಿಗಳು ನಡೆಯುತ್ತಿವೆ ; (ವಿವರ ನೀಡುವುದು)

(ಆ) ಯಾವುದೇ ಪರವಾನಗಿ ಪಡೆಯದೇ ಗ್ರಾಮ ಪಂಚಾಯತಿಯ ಗಮನಕ್ಕೆ ತರದೇ ಅಕ್ರಮವಾಗಿ ನಡೆಸುತ್ತಿರುವ ಅನಧಿಕೃತ ಕಟ್ಟಡಗಳು, ಅಂಗಡಿ, ಮನೆಗಳನ್ನು ಕಂದಾಯಕ್ಕೆ ಒಳಪಡಿಸಿ, ಗ್ರಾಮ ಪಂಚಾಯತಿಯ ಅಧೀನಕ್ಕೆ ಒಳಪಡಿಸಲು ಸರ್ಕಾರ ಯಾವುದಾದರೂ ಕ್ರಮ ವಹಿಸಲಾಗಿದೆಯೇ ; (ಮಾಹಿತಿ ನೀಡುವುದು)

(ಇ) ಕೊಡಗು ಜಿಲ್ಲೆಯಲ್ಲಿನ ಎಷ್ಟು ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿ ಅನಧಿಕೃತ ಕಟ್ಟಡಗಳು/ಅಂಗಡಿಗಳು/ಮನೆಗಳು ನಡೆಯುತ್ತಿವೆ ; (ಅವುಗಳ ಮಾಹಿತಿ ನೀಡುವುದು)

(ಈ) ಇಂತಹ ಅನಧಿಕೃತ ಕಟ್ಟಡಗಳು/ಅಂಗಡಿಗಳು/ಮನೆಗಳು ಗ್ರಾಮ ಪಂಚಾಯತಿಯಿಂದ ತೆರಿಗೆ ವಿಧಿಸಲು ನಿಯಮದಲ್ಲಿ ಅವಕಾಶವಿದೆಯೇ ; ಇದ್ದಲ್ಲಿ, ಆ ಬಗೆಗಿನ ಆದೇಶ ಒದಗಿಸುವುದು;

(ಉ) ಅವಕಾಶ ಇಲ್ಲವೆಂದಾದಲ್ಲಿ ಅಂತಹ ಅನಧಿಕೃತ ಕಟ್ಟಡಗಳು /ಅಂಗಡಿಗಳು/ಮನೆಗಳನ್ನು ಯಾವ ರೀತಿ ತೆರಿಗೆಗೆ ಒಪಳಪಡಿಸಬಹುದಾಗಿದೆ ? (ವಿವರ ನೀಡುವುದು)